# ಯಶಸ್ವಿ ವ್ಯಾಪಾರಸ್ಥನ ಕೆಲವು ತಪ್ಪುಗಳು[1]

## ಲೂಕ 12:13-21; ಒಂದು ನಿಕಟ ನೋಟ

ಜೀವನವು ಒಂದು ವ್ಯಾಪಾರದ ಮಳಿಗೆಗೆ ಹೋಲಿಕೆಯಾಗಿದೆ. ಅಲ್ಲಿ ಅಮೂಲ್ಯವಾದ ವಸ್ತುಗಳು ಕಡಿಮೆ ಬೆಲೆ ಹಾಗೂ ಅಪ್ರಯೋಜನವಾದ ವಸ್ತುಗಳು ಹೆಚ್ಚಿನ ಬೆಲೆ ಎಂದಿರುತ್ತದೆ.[2] ಈ ದಿನಗಳಲ್ಲಿ ಬೆಲೆಯುಳ್ಳ ವಸ್ತುಗಳು ಪ್ರಮುಖವಾಗಿರದೆ ಗುಣಮಟ್ಟವಿಲ್ಲದ ವಸ್ತುಗಳು ಬೆಲೆಬಾಳದೆ ಇರುತ್ತವೆ.

ವಸ್ತುಗಳ ಪ್ರಧಾನವೆಂದು ಹೇಳುವ ಲೋಕದಲ್ಲಿ ನಾವುಗಳಿದ್ದೇವೆ.[3] ಕೆಲವರು ಹಣ ಸಂಪಾದನೆಗೂ, ಆರೋಗ್ಯಕರವಾದ ಆರ್ಥಿಕ ಯಶಸ್ಸಿಗೂ ಪ್ರಯತ್ನಿಸುತ್ತಿದ್ದಾರೆ. ಇಂಥಹ ಪರಿಸರದಲ್ಲಿ ಇರುವ ನಾವುಗಳು, ಸತ್ಯವಾದ ಮೌಲ್ಯಗಳನ್ನು ಕಳಕೊಳ್ಳುವ ಸಾಧ್ಯತೆಗಳಿವೆ: ಲೂಕ 12:13-21ರಲ್ಲಿ ಇದೇ ವಿಧವಾದ ಪ್ರಸ್ತಾಪ ಮಾಡಲಾಗಿದೆ.

ಒಂದು ದಿವಸ ಯೇಸು ಬೋಧಿಸುತ್ತಿರುವಾಗ ಒಬ್ಬನು - ಬೋಧಕನೇ, ತಂದೆಯ ಆಸ್ತಿಯನ್ನು ನನಗೆ ಪಾಲು ಮಾಡಿಕೊಡುವಂತೆ ನನ್ನ ಅಣ್ಣನಿಗೆ ಹೇಳು ಅಂದನು (ವಚನ 13). ಆ ಮನುಷ್ಯನು ಯೇಸುವಿನ ಬೋಧನೆಯಲ್ಲಿ ಆಸಕ್ತಿ ಹೊಂದಿರಲಿಲ್ಲ. ಆತನ ವಾಕ್ಯಗಳಲ್ಲಿ ಆನಂದಿಸುವ ಬದಲು, ಅವನು ತನ್ನ ಕೌಟುಂಬಿಕ ವ್ಯವಹಾರದಲ್ಲಿ ಆಸಕ್ತನಾಗಿದ್ದನು. ಅನೇಕ ಪ್ರಸಂಗಿಗಳು ಈ ವಿಧವಾದ ಅನುಭವವನ್ನು ಹೊಂದಿರುತ್ತಾರೆ. ಅವರು ಜನರಿಗೆ ಬೋಧಿಸಿ ನಿರಂತರವಾದ ಜೀವಿತಕ್ಕೆ ಮುನ್ನಡೆಯಲು ಸಹಾಯಿಸುತ್ತಿರುವ ಸಂದರ್ಭದ ನಡುವೆ, ಒಬ್ಬನು ಅನಗತ್ಯ ಪ್ರವೇಶ ಮಾಡಿರುತ್ತಾನೆ.[4]

ಆ ಮನುಷ್ಯನಲ್ಲಿದ್ದ ವಾಕ್ಯದ ಕುರಿತಾದ ನಿರಾಸಕ್ತಿ ಯೇಸುವಿಗೆ ಬೇಸರಪಡಿಸಿತ್ತು. ಯೇಸು ಆ ಮನುಷ್ಯನಿಗೆ, "ನನ್ನನ್ನು ನಿನಗೆ ನ್ಯಾಯಾಧಿಪತಿಯನ್ನಾಗಿ ಅಥವಾ ಪಾಲು ಮಾಡುವವನಾಗಿ ನೇಮಿಸಿದವರಾರು?"[5] ಅಂದನು (ವಚನ 14).[6] ಆ ಮನುಷ್ಯನ ಸಮಸ್ಯೆಯನ್ನು ಆತನು ಗ್ರಹಿಸಿಕೊಂಡನು. ಆತನು - ಅವನಿಗೆ - ಎಲ್ಲಾ ಲೋಬಕ್ಕೂ, ಎಚ್ಚರಿಯಾಗಿದ್ದು ನಿಮ್ಮನ್ನು ಕಾಪಾಡಿಕೊಳ್ಳಿರಿ: ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವಧಾರವಾಗುವದಿಲ್ಲ ಅಂದನು (ವಚನ 15). ನಂತರ ಒಂದು ಸಾಮ್ಯವನ್ನು ಹೇಳಿ:

> ಅದೇನಂದರೆ ಒಬ್ಬಾನೊಬ್ಬ ಐಶ್ವರ್ಯವಂತನ ಭೂಮಿಯು ಚೆನ್ನಾಗಿ ಬೆಳೆಯಿತು. ಆಗ ಅವನು ತನ್ನೊಳಗೆ ನಾನೇನು ಮಾಡಲಿ? ನನ್ನ ಬೆಳೆಯನ್ನು ತುಂಬಿಡುವದಕ್ಕೆ ನನಗೆ ಸ್ಥಳವಿಲ್ಲವಲ್ಲಾ ಎಂದು ಆಲೋಚಿಸಿ - ಒಂದು ಕೆಲಸ ಮಾಡುತ್ತೇನೆ; ನನ್ನ ಕಣಜಗಳನ್ನು ಕೀಳಿಸಿ ಅವುಗಳಿಗಿಂತ ದೊಡ್ಡ ಕಣಜಗಳನ್ನು ಕಟ್ಟಿಸುವೆನು. ಅಲ್ಲಿ ನನ್ನ ಎಲ್ಲಾ ದವಸ ಧಾನ್ಯಗಳನ್ನೂ ಸರಕುಗಳನ್ನೂ ತುಂಬಿಟ್ಟು ನನ್ನ ಜೀವಾತ್ಮಕ್ಕೆ ಜೀವವೇ, ಅನೇಕ ವರುಷಗಳಿಗೆ ಬೇಕಾದಷ್ಟು ಸರಕು ನಿನಗೆ ಬಿದ್ದದೆ; ಮಿಶ್ರಮಿಸಿಕೋ, ಊಟಮಾಡು ಕುಡಿ ಸುಖಪಡು ಎಂದು ಹೇಳುವೆನು ಅಂದುಕೊಂಡನು. ಆದರೆ ದೇವರು ಅವನಿಗೆ - ಬುದ್ಧಿ ಹೀನನು ನೀನು! ಈ ಹೊತ್ತು ರಾತ್ತಿ ನಿನ್ನಪ್ರಾಣವನ್ನು ನಿನ್ನ ಕಡೆಯಿಂದ ಕೇಳುವರು; ಆಗ ನೀನು ಸಿದ್ಧಮಾಡಿಟ್ಟಿರುವದು ಯಾರಿಗಾಗುವದು ಎಂದು ಹೇಳಿದನು (ವಚನಗಳು 16-20).

ತಾನು ಬೋಧಿಸಿದ ಪಾಠವನ್ನು ಅಂತ್ಯಗೊಳಿಸಿ, "ತನಗೋಸ್ಕರ ದ್ರವ್ಯವನ್ನಿಟ್ಟುಕೊಂಡು

ದೇವರ ವಿಷಯಗಳಲ್ಲಿ ಐಶ್ವರ್ಯವಂತನಾಗದೆ ಇರುವವನು ಅವನಂತೆಯೇ ಇದ್ದಾನೆ ಅಂದನು" (ವಚನ 21).[9]

ಸಾಮ್ಯದಲ್ಲಿರುವ ವ್ಯಕ್ತಿಯನ್ನು ಲೋಕವು ಯಶಸ್ವಿಯಾದವನು ಎಂದು ಪರಿಗಣಿಸಬಹುದು. ಅವನು ವ್ಯಾಪಾರಿ ಹಾಗೂ ಒಬ್ಬ ವ್ಯವಸಾಯಗಾರನಾಗಿ, ಅಭಿವೃದ್ಧಿ ಹೊಂದಿದ್ದನು ಎಂದು ತಿಳಿದು ಬರುತ್ತದೆ. ನಾವುಗಳು ಅವನನ್ನು "ಯಶಸ್ವಿ ವ್ಯಾಪಾರಸ್ಥನು" ಎಂದು ಕರೆಯ ಬಹುದು. ಅವನು ಹಣ ಮಾಡುವದರಲ್ಲಿ ನಿಪುಣನು ಎಂದು ನಾನು ಹೇಳುತ್ತಿರುವದಿಲ್ಲ. ಯಾಕಂದರೆ, "ಹಣದಾಶೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ, ಪೌಲನು ಇದರ ಕುರಿತು, ಮೇಲಿನ *ಪ್ರೀತಿಯ* ಮಾತನ್ನೇ ಹೇಳಿರುವನು" (1 ತಿಮೋಥೆ 6:10ಎ; ಒತ್ತಿ ಹೇಳಿದ್ದು ನನ್ನದು). ಹಣವನ್ನು ಉತ್ತಮವಾಗಿ ಬಳಸಬಹುದು. "ಅರಿಮಥಾಯದ ಯೋಸೇಫಸನು ಧನವಂತನು, ಯೇಸುವಿನ ಶಿಷ್ಯನಾಗಿದ್ದನು" (ಮತ್ತಾಯ 27:57). ಹಣವು ಸಮಸ್ಯೆಯಾಗಿರದೆ, ಅದರ ಕುರಿತ ಮನೋಭಾವವು ಪ್ರಮುಖವಾಗಿದೆ. ಬೈಲೆಯವರು ಇದರ ಕುರಿತು: "ಹಣವನ್ನು *ಹೊಂದಿರುವದು* ವೇದನೆಯಾಗಿರದೆ, ಅದರ *ಬಳಕೆಯ* ವಿಧಾನವು ಪ್ರಮುಖವಾಗಿರುತ್ತದೆ."[10]

ಧನವಂತ ಮರಣಿಸಿದಾಗ, ಅವನ ಶವಸಂಸ್ಕಾರದಲ್ಲಿ ಮಾತನಾಡಿದ ಪ್ರಸಂಗಿಯು, ಅವನಲ್ಲಿದ್ದ ಸದ್ಗುಣಗಳನ್ನು ವಿವರಿಸಿರಬಹುದು. ಯಾಕೆಂದರೆ ಧನಿಕನು ನ್ಯಾಯವಾಗಿ ಧನಿಕನಾಗಿದ್ದನು. ಅವನು ಮೋಸಕರವಾದ ಮಾರ್ಗದಿಂದ ಸಂಪಾದಿಸಿದ್ದನು ಎಂಬ ಯಾವ ಸೂಚನೆಗಳು ಇರುವದಿಲ್ಲ. ಅವನು ಭ್ರಷ್ಟತನವಿಲ್ಲದ, ನೈತಿಕ ಮನುಷ್ಯನಾಗಿದ್ದನು. ಅದಾಗ್ಯೂ ಯಶಸ್ವಿಯಾದ ಈ ಮನುಷ್ಯನು ತನ್ನ ಆತ್ಮಕ್ಕೆ ಅಘಾತ ಮಾಡಿಕೊಂಡಿದ್ದನು.

## ಅವನು ಮಾಡಿದ 1ನೆಯ ತಪ್ಪು – ಮೌಲ್ಯಗಳನ್ನು ಕಳಕೊಂಡಿದ್ದನು

ಮೊದಲನೆಯದಾಗಿ ಅವನು ಮೌಲ್ಯಗಳನ್ನು ಕಳಕೊಂಡಿದ್ದನು. ದೇವರ ಸಹಜವಾದ ಕಾನೂನಿನ ಮೂಲಕ ತನ್ನ ಬದುಕನ್ನು ಕೊಂಡುಕೊಂಡಿದ್ದನು, ಆದರೆ ಅವನು ಆತ್ಮೀಕ ನಿಯಮಗಳನ್ನು ಉಲ್ಲಂಘನೆ ಮಾಡಿದ್ದನು.

ಜೀವನದ ಗುರಿ, ಸಾಧನೆ, ಹಾಗೂ ಮುನ್ನುಗುವ ನಿಯಮಗಳೇ ಪ್ರಮುಖ ಅಂಶಗಳಾಗಿವೆ. ಒಂದು ವೇಳೆ ಅವನ ಸಿದ್ದಾಂಥಗಳನ್ನು ನಾನು ಪಾಲಿಸಿದ್ದೇ ಆಗಿದ್ದರೆ, ಈ ದಿನಗಳಲ್ಲಿ ನಾನು ಬಹು ಶ್ರೀಮಂತನಾಗಿರುತ್ತಿದ್ದೇನು ಎಂದು ಹೇಳುವದು ತಪ್ಪಾಗಬಹುದು. ಶ್ರೀಮಂತನಾಗಲು ಮನಸ್ಸು ಚಲದಿಂದ ತುಂಬಿರಬೇಕು. ಅಂತಹ ತಪ್ಪಾದ ಉದ್ದೇಶಗಳ ಬಗ್ಗೆ ಪೌಲನು ಬರೆದು:

> *ಐಶ್ವರ್ಯವಂತರಾಗಬೇಕೆಂದು* ಮನಸ್ಸುಮಾಡುವವರು ದುಷ್ಪ್ರೇರಣೆಯೆಂಬ ಉರ್ಲಿನಲ್ಲಿ ಸಿಕ್ಕಿಕೊಂಡು ಬುದ್ಧಿವಿರುದ್ಧವಾಗಿಯೂ ಹಾನಿಕರವಾಗಿಯೂ ಇರುವ ಅನೇಕ ಆಶೆಗಳಲ್ಲಿ ಬೀಳುತ್ತಾರೆ. ಇಂಥ ಆಶೆಗಳು ಮನುಷ್ಯರನ್ನು ಸಂಹಾರನಾಶನಗಳಲ್ಲಿ ಮುಳುಗಿಸುತ್ತವೆ. ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಆದರಿಂದ ಕ್ರಿಸ್ತನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ (1 ತಿಮೋಥೆ 6:9, 10; ಒತ್ತಿ ಹೇಳಿದ್ದು ನನ್ನದು).

ಶ್ರೀಮಂತನ ಮನಸ್ಸು ಅವನ ಸಂಪಾದನೆಯಲ್ಲಿ ನಿಗ್ರಹವಾಗಿತ್ತು. ವಾಕ್ಯದ ಪ್ರಕಾರವಾಗಿ ಅವನ ದೇವರ ಬಗ್ಗೆಯೂ ಚಿಂತಿಸದೆ, ತನ್ನ ಜೊತೆಯವರ ಕುರಿತಾಗಿಯೂ ಚಿಂತಿಸಲಿಲ್ಲ. ಕಣ್ಣಿಗೆ ಅಡ್ಡವಾಗಿರುವ ಒಂದು ಕಾಸು, ಬೆಟ್ಟವನ್ನೇ ಮರೆ ಮಾಡಬಹುದು.[11]

"ನಾವು *ಕಾಣುವಂಥದ್ದನ್ನು*[12] ಲಕ್ಷಿಸದೆ *ಕಾಣದಿರುವಂಥದ್ದನ್ನು* ಲಕ್ಷಿಸುವವರಾಗಿದ್ದೇವೆ; ಕಾಣುವಂಥದ್ದು[13] ಸ್ವಲ್ಪಕಾಲ ಮಾತ್ರ ಇರುವದು. ಕಾಣದಿರುವಂಥದ್ದು ಸದಾಕಾಲ ಇರುವದು" (2 ಕೊರಿಂಥ 4:18; ಒತ್ತಿ ಹೇಳಿದ್ದು ನನ್ನದು). ಯೇಸು ಮಾತನಾಡಿ, "ಒಬ್ಬ ಮನುಷ್ಯನು

ಲೋಕವನ್ನೆಲ್ಲಾ ಸಂಪಾದನೆ ಮಾಡಿಕೊಂಡರೂ ಪ್ರಾಣನಷ್ಟ ಪಟ್ಟರೆ ಅವನಿಗೆ ಪ್ರಯೋಜನ ವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು? (ಮತ್ತಾಯ 16:26) ಎಂದಿರುವನು. "ಮೊದಲು ದೇವರ ರಾಜ್ಯಕ್ಕಾಗಿ ನೀತಿಗಾಗಿ ತವಕಪಡಿರಿ" (ಮತ್ತಾಯ 6:33). ಒಬ್ಬನ ಆಸ್ತಿ ಎಲ್ಲಿದಿಯೋ ಎಂಬುದು ನೋಡುವುದರ ಮುಖಾಂತರ ಅವನ ಹೃದಯವು ಎಲ್ಲಿದಿಯೋ ಎಂದು ಹೇಳಬಹುದು ಎಂದರು (ಮತ್ತಾಯ 6:21).

ಐಶ್ವರ್ಯವಂಥನು ತನ್ನ ಸ್ವಾಸ್ಥ್ಯದ ಮೇಲೆ ಮನಸ್ಸಿಟ್ಟಿದ್ದನು. ಆದ್ದರಿಂದ ದೇವರು ಅವನಿಗೆ, "ಈ ಹೊತ್ತು ರಾತ್ರಿ ನಿನ್ನ ಪ್ರಾಣವನ್ನು ನಿನ್ನ ಕಡೆಯಿಂದ ಕೇಳುವರು; ಆಗ ನೀನು ಸಿದ್ಧಮಾಡಿಟ್ಟಿರುವದು ಯಾರಿಗಾಗುವದು?" ಅಂದನು (ಲೂಕ 12:20). ಜನರು ಐಶ್ವರ್ಯಕ್ಕಾಗಿ ಎಷ್ಟೆ ತವಕ ಪಟ್ಟರೂ, ಅಂತ್ಯದಲ್ಲಿ ಅವರಿಗೆ ಏನೂ ದೊರಕುವದಿಲ್ಲ.[14] ಕೀರ್ತನೆಗಾರನ ಪ್ರಕಾರ, "ಅವನು ಸಾಯುವಾಗ, ಏನೂ ತೆಗೆದುಕೊಂಡು ಹೋಗ ಲಾರನಷ್ಟೆ" (ಕೀರ್ತನೆ 49:16, 17). ಯೋಬನ ಪ್ರಕಾರ, "ಏನೂ ಇಲ್ಲದವನಾಗಿ ತಾಯಿಯು ಗರ್ಭದಿಂದ ಬಂದೆನು; ಏನೂ ಇಲ್ಲದವನಾಗಿ ಗತಿಸಿ ಹೋಗುವೆನು" (ಯೋಬ 1:21ಎ). ಪೌಲನು ಬರೆದು: "ನಾವು ಲೋಕಕ್ಕೆ ಏನೂ ತಕ್ಕೊಂಡು ಬರಲಿಲ್ಲವಷ್ಟೆ, ಅದರೊಳಗಿಂದ ಏನೂ ತಕ್ಕೊಂಡು ಹೋಗಲಾರೆವು" (1 ತಿಮೋಥೆ 6:7).[15] ಸಮಾಧಿಯಿಂದ ಆಚೆಗೆ ಬಾರದೆ ಇರುವ ಸಂಗತಿಗಳಿಗೆ ಆಧ್ಯತೆ ನೀಡಬಾರದು, ಆದ್ದರಿಂದ ಯೇಸು,

> ಭೂಲೋಕದಲ್ಲಿ ಗಂಟುಮಾಡಿ ಇಟ್ಟುಕೊಳ್ಳ ಬೇಡಿರಿ; ಇಲ್ಲಿ ಅಂತೂ ಅದು ನುಸಿಹಿಡಿದು ಕಿಲುಬು ಹತ್ತಿ ಕೆಟ್ಟುಹೋಗುವದು; ಇಲ್ಲಿ ಕಳ್ಳರು ಕನ್ನಾಕೊರೆದು ಕದಿಯುವರು. ಆದರೆ ಪರಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಿರಿ; ಅಲ್ಲಿ ಅದು ನುಸಿಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವದಿಲ್ಲ; ಅಲ್ಲಿ ಕಳ್ಳರು ಕನ್ನಾಕೊರೆಯುವದೂ ಇಲ್ಲ, ಕದಿಯುವದೂ ಇಲ್ಲ (ಮತ್ತಾಯ 6:19, 20).

ಒಬ್ಬ ರೈತನು, ಒಬ್ಬ ಪ್ರಸಂಗಿಯನ್ನು ಎತ್ತರದ ಬೆಟ್ಟಕ್ಕೆ ಕರೆದೊಯ್ದು ಪೂರ್ವ ಪಶ್ಚಿಮ ಉತ್ತರ ಹಾಗೂ ದಕ್ಷಿಣಕ್ಕಿರುವದೆಲ್ಲವು ನನ್ನದು ಎಂದು ಹೇಳಲು, ಪ್ರಸಂಗಿಯು ಪರಲೋಕದ ಕಡೆಗೆ ಕೈ ಚಾಚಿ ಅದರಲ್ಲಿ ನೀನು ಎಷ್ಟು ಭಾಗವನ್ನು ನಿನ್ನದಾಗಿರಿಸಿ ಕೊಂಡಿದ್ದೀ? ಎಂದು ಕೇಳಿದನು, ಆದ್ದರಿಂದ ಪ್ರಮುಖವಾದದ್ದಕ್ಕೆ *ಆಧ್ಯತೆ* ನೀಡಬೇಕು.

## ಅವನು ಮಾಡಿದ 2ನೆಯ ತಪ್ಪು - ಅವನು ಸ್ವಾರ್ಥಿಯಾಗಿದ್ದನು

ಎರಡನೆಯದಾಗಿ, ಆ ಯಶಸ್ವಿಯಾದ ವ್ಯಾಪಾರಸ್ಥನು ಸ್ವಾರ್ಥಿಯಾಗಿದ್ದನು. ಗ್ರೀಕ್ ಬರವಣಿಗೆಯ ಪ್ರಕಾರ, "ನಾನು" ಎಂಬ ಪದವನ್ನು ಮೂರು ವಚನಗಳಲ್ಲಿ ಹನ್ನೆರಡು ಸಾರಿ ಬಳಸಲಾಗಿದೆ (ನಾನು ಮತ್ತು ನನ್ನ).

ಶ್ರೀಮಂತನಾಗಬೇಕೆಂದಿರುವವನು. ಸ್ವಾರ್ಥಿಯಾಗಿರುವದರಿಂದ, ಇತರ ಬಗ್ಗೆ ಯೋಚಿಸಲಾರನು. ಒಂದು ಸಾರಿ ಒಬ್ಬ ಕ್ರೈಸ್ತ ವ್ಯಾಪಾರಸ್ಥನು ನನ್ನ ಬಳಿಯಲ್ಲಿ - ನಾನು ಬಹಳಷ್ಟು ಸಂಪಾದನೆ ಮಾಡಿರುವೆನು ಆದರೆ ಅದನ್ನು ಏನು ಮಾಡಬೇಕು ಎಂದು ತೋಚ ದಾಗಿದೆ ಅಂದನು. ನಾನು ಅದನ್ನು ಬಡ್ಡಿ ವ್ಯವಹಾರಕ್ಕೆ ಹಾಕಿದ್ದೇನೆ ಅಂದನು. ಕೆಲ ಸಮಯದ ನಂತರ, ಅವನ ಸಭೆಯಲ್ಲಿ ಸಭೆಗಾಗಿ ದೇಣಿಗೆಯನ್ನು ಎತ್ತುವಾಗ, ಅಲ್ಲಿದ್ದ ವಿಧವೆಯರು ನೀಡಿ ದ್ದಕ್ಕಿಂತಲೂ, ಕಡಿಮೆಯಾಗಿ ಇವನು ನೀಡಿದ್ದನು! ಕಿಟಕಿಯ ಗಾಜಿಗೂ ಹಾಗೂ ಕನ್ನಡಿಗೂ ಇರುವ ವ್ಯತ್ಯಾಸವೇನೆಂದರೆ ಕಿಟಕಿಯ ಗಾಜಿನ ಮೂಲಕ ಇತರರನ್ನು ನೋಡಬಹುದು. ಆದರೆ ಕನ್ನಡಿಯ[16] ಹಿಂಭಾಗದಲ್ಲಿ ಬೆಳ್ಳಿಯ ಲೇಪನವಿರುವದರಿಂದ ಅದರಲ್ಲಿ ನೋಡುವವನ ಪ್ರತಿಬಿಂಬವನ್ನು ಮಾತ್ರ ನೋಡಬಹುದಾಗಿದೆ?[17]

ಈಗಾಗಲೇ ಅವನ ಬಳಿ "ಖಾಲಿಯಾದ ಪಾತ್ರೆಗಳು" ಇದ್ದದನ್ನು ಐಶ್ವರ್ಯವಂಥನು

ಮರೆತ್ತಿದ್ದನು. ವೇದನೆಗೊಂಡವರಿಗೂ, ಹಸಿದವರ ಬಾಯಿಗೂ, ಚಳಿಯಲ್ಲಿದವರಿಗೂ, ವಿಧವೆಯರಿಗೂ ಹಾಗೂ ಅನಾಥರಿಗೂ ನೀಡಬಹುದಿತ್ತು[18] (ನೋಡಿ ಲೂಕ 12:33; ಎಫೆಸ 4:28).

ಇತರರ ಸೇವೆಗಾಗಿ ದೇವರು ನಮ್ಮನ್ನು ಈ ಲೋಕದಲ್ಲಿ ಇರಿಸಿದ್ದಾನೆ. ಆದ್ದರಿಂದ ಸಮಯವಿರಲಾಗಿ ಎಲ್ಲರಿಗೂ ಒಳ್ಳೆದನ್ನು ಮಾಡೋಣ: "ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ" (ಗಲಾತ್ಯ 6:10). ಜಾನ್ ಹೆನ್ಸ್ ಎಂಬ ಉಪ್ಪಿನಕಾಯಿ ಮಾರುವವನು,[19] "ಮೊದಲು ದೇವರು, ಇತರರು ಎರಡನೆಯವರು, ಉಪ್ಪಿನಕಾಯಿ ವ್ಯಾಪಾರ ಮೂರನೆಯದು" ಎಂಬ ಶ್ಲೋಕವನ್ನು ಹೊಂದಿದ್ದನು. ಒಬ್ಬ ಮುದುಕನು ತನ್ನ ಮಗನಿಗೆ, "ನ್ಯಾಯತೀರ್ಪಿನ ದಿನದಲ್ಲಿ ನೀನು ಹೊಂದಿರುವ ಹಣದ ಬಗ್ಗೆ ದೇವರು ಮೂರು ಪ್ರಶ್ನೆಗಳನ್ನು ನಿನಗೆ ಕೇಳುವನು: (1) ನೀನು ಮಾಡಬೇಕಾದ್ದನ್ನೇ ಮಾಡಿರುವೆಯಾ? (2) ಅದನ್ನು ನ್ಯಾಯವಾಗಿ ಸಂಪಾದನೆ ಮಾಡಿರುವೆಯಾ? (3) ಅದನ್ನು ಇತರರಿಗಾಗಿ ಬಳಸದೆಯಾ?" ಐಶ್ವರ್ಯವನ್ನು ನೀನು ಮಾತ್ರ ಆನಂದಿಸದೆ, ಅದನ್ನು ಇತರರ ಸಹಾಯಕ್ಕಾಗಿಯೂ ಉಪಯೋಗಿಸಬೇಕು.

ತನ್ನ ಸಂಪಾದನೆಯನ್ನು ತಾನು ಏನನ್ನಾದರೂ ಮಾಡಬಹುದು ಎಂದು ಐಶ್ವರ್ಯವಂಥನು ತಿಳಿದಿದ್ದನು, ತಾನು ಅದರ *ವ್ಯವಸ್ಥಾಪಕನು* ಎಂಬುದನ್ನು ಅವನು ಮೆರೆತ್ತಿದ್ದನು ನಾವು ಹೊಂದಿರುವದು ನ್ಯಾಯ ಸಮ್ಮತವಾಗಿದ್ದರೂ ವ್ಯಾಕದ ಪ್ರಕಾರ, ದೇವರು ಅದನ್ನು ನಮಗೆ ದಯಪಾಲಿಸಿರುವದರಿಂದ, ಅದರ ಮನೆ ವಾರ್ತೆಯವರು ನಾವಾಗಿದ್ದೇವೆ[20] ಐಶ್ವರ್ಯವಂಥನು ತಾನು ಮುಂದುವೆರದು - "ನಾನು ಹೊಂದಿರುವದು, *ನನ್ನದೇ* ಅದನ್ನು ನಾನು ಏನು ಬೇಕಾದರೂ ಮಾಡಬಹುದು!"

ಸ್ವಾರ್ಥದಿಂದ ಬಿಡುಗಡೆಯಾಗುವದೇ ನಮ್ಮ ಆತ್ಮೀಕ ಹೋರಾಟವಾಗಿದೆ (ನೋಡಿ ಫಿಲಿಪ್ಪಿ 2:3). ಒಬ್ಬ ಸ್ವಾರ್ಥಿಯಾದ ಎಡಿತ್ ಎಂಬ ಮಹಿಳೆ ಪೂರ್ವ, ಪಶ್ಚಿಮ, ಉತ್ತರ ಹಾಗೂ ದಕ್ಷಿಣದ ಭಾಗದಿಂದ ಬಂಧಿಸಲ್ಪಟ್ಟಿದ್ದಳು.[21] ನಾವುಗಳು ಸಹ ಎಡಿತ್ ಹಾಗೆ ಇರ ಬಹುದಲ್ಲಾ? ನಾವು ಇತರರ ಬಗ್ಗೆ ಚಿಂತಿಸುತ್ತೇವೋ? ಅಥವಾ ಸಹಾಯ ಮಾಡುವ ಅವಕಾಶವನ್ನು ಕಳಕೊಂಡಿದ್ದೇವೋ? ಇತರರ ಬಗ್ಗೆ ಚಿಂತಿಸುವದನ್ನು ದೇವರು ನಮಗೆ ಸಹಾಯಿಸಲಿ!

## ಅವನು ಮಾಡಿದ 3ನೆಯ ತಪ್ಪು –
## ಐಶ್ವರ್ಯದಿಂದ ತನ್ನ ಆತ್ಮವನ್ನು ಸಂಪಾದಿಸಬಹುದು ಎಂದು ಭಾವಿಸಿದ್ದನು

ಐಶ್ವರ್ಯವಂತನ ಮೂರನೆಯ ತಪ್ಪು - ಭೌತಿಕ ವಸ್ತುಗಳಿಂದ ಆತ್ಮಕ್ಕೆ ಈಡು ಕೊಡಬಹುದೆಂದು ತಿಳಿದನು. "ಜೀವವೇ, ಅನೇಕ ವರುಷಗಳಿಗೆ ಬೇಕಾದಷ್ಟು ಸರಕು ನಿನಗೆ ಬಿದ್ದದೆ, ವಿಶ್ರಮಿಸಿಕೋ, ಊಟಮಾಡು, ಕುಡಿ ಸುಖಪಡು ಎಂದು ಹೇಳುವೆನು ಎಂದು ಕೊಂಡನು"[22] (ಲೂಕ 12:19).

ಆ ಮೂರ್ಖನ ಮಾತುಗಳು ಸಹಜವಾಗಿಯೇ ಇದ್ದವು. ಒಂದು ಮೇಜು ನಿಮ್ಮ ಮುಂದೆ ಇದೆ ಎಂದು ತಿಳಿಯಿರಿ.[23] ಮೇಜಿನ ಮೇಲಿನ ಎಡಭಾಗದಲ್ಲಿ ರುಚಿಕರವಾದ ಆಹಾರವಿದ್ದು, ಬಲಬದಿಯಲ್ಲಿ ಒಂದು ಸತ್ಯವೇದ ಇಡಲ್ಪಟ್ಟಿದೆ. ಒಂದು ದೇಹಕ್ಕೆ ಆಹಾರವಾದರೆ, ಇನ್ನೊಂದು, ಆತ್ಮಕ್ಕೆ ಆಹಾರವಾಗಿದೆ. ಇವುಗಳನ್ನು ಅದಲು ಬದಲು ಮಾಡಲು ಸಾಧ್ಯವಿಲ್ಲ. ಇದನ್ನು ಕುರಿತು ಯೇಸು, "ನಾಶವಾಗುವ ಹಾಗೂ ನಿತ್ಯಕ್ಕೆ ನಡೆಸುವ ಆಹಾರಗಳ ಹೋಲಿಕೆ ಮಾಡಿದನು" (ಯೋಹಾನ 6:27). "ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕದೆ, ಕರ್ತನ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದ ಬದುಕುವನು" ಅಂದನು (ಮತ್ತಾಯ 4:4). ದೈಹೀಕವಾದ ಆಹಾರವನ್ನು ಪೂರೈಸಿ, ಆತ್ಮೀಕವಾದ ಆಹಾರವನ್ನು ಒದಗಿಸದೆ ಇರುವದು ಮೂರ್ಖತನದ ಉತ್ತುಂಗವಾಗಿದೆ.

ಐಶ್ವರ್ಯವಂತನು ಸಿಕ್ಕಿಕೊಂಡ ಈ ವಿಧವಾದ ಬಲೆಯಲ್ಲಿ ನಾವುಗಳು ಸಿಕ್ಕಿಕೊಂಡಿದ್ದೇವೋ? ಒಂದು ವೇಳೆ, ನನಗೆ ಈ ಸಂಗತಿ ಇಲ್ಲದಿದ್ದರೆ,[24] ನಾನು ಆನಂದವಾಗಿರುತ್ತಿದ್ದೆನು ಎಂದು ಊಹಿಸಿ ಹೇಳುತ್ತಿದ್ದೇವೋ? ಅನೇಕರು ಬಹಳ ಸಂಪಾದನೆಯಿಂದ ತಾವು ಸುರಕ್ಷಿತ ಎಂದು ತಿಳಿದಿರುತ್ತಾರೆ. ಆದ್ದರಿಂದ, "ಕರ್ತನು, ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವಾಧಾರವಾಗುವದಿಲ್ಲ" ಅಂದಿರುವನು (ಲೂಕ 12:15; KJV). ಬಹಳ ಸಂಪಾದನೆಯಿಂದ ಆನಂದವು ದೊರಕದು, ಆದರೆ ಈಗಿರುವದರಲ್ಲೇ ಸಕರಾತ್ಮಕ ದೋರಣೆ ಹೊಂದಿರಬೇಕು. ಪೌಲನು ಬರೆದು,

> ... ಸಂತುಷ್ಟಿಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ. ನಾವು ಲೋಕದೊಳಕ್ಕೆ ಏನೂ ತಕ್ಕೊಂಡ ಬರಲಿಲ್ಲವಷ್ಟೆ; ಅದರೊಳಗಿಂದ ಏನೂ ತಕ್ಕೊಂಡು ಹೋಗಲಾರೆವು. ನಮಗೆ ಅನ್ನವಸ್ತ್ರಗಳಿದ್ದರೆ ಸಾಕು; ಐಶ್ವರ್ಯವಂತರಾಗಬೇಕೆಂದು ಮನಸ್ಸುಮಾಡುವವರು ದುಷ್ಪ್ರೇರಣೆಯೆಂಬ ಉರ್ಲಿನಲ್ಲಿ ಸಿಕ್ಕಿಕೊಂಡು (1 ತಿಮೋಥೆ 6:6-8).

ಒಬ್ಬರು ಹೇಳಿರುವಂತೆ ಲೋಕವೆಲ್ಲಾ ಆನಂದವನ್ನು ಬಯಸಿದರೂ ಈ ಕುರಿತು ಅನೇಕರು ತಪ್ಪಾದ ಮನೋಭಾವವನ್ನು ಹೊಂದಿದ್ದಾರೆ. "ಹೊಂದುವದರಿಂದ ಆನಂದವು ದೊರಕದೆ, ನೀಡುವದರಿಂದ ದೊರಕುತ್ತದೆ."[25] ಒಳ ಬರುವದಕ್ಕಿಂತ, "ಹೊರಹೋಗುವದು ಜೀವಿತದ ಪ್ರಮುಖ ಧ್ಯೇಯವಾಗಿದೆ. ತೆಗೆದುಕೊಳ್ಳುವದಕ್ಕಿಂತ ಕೊಡುವದೇ ಹೆಚ್ಚಿನ ಭಾಗ್ಯವಾಗಿದೆ" (ಅಪೊಸ್ತಲರ ಕೃತ್ಯಗಳು 20:35ಬಿ) ಎಂದು ಯೇಸು ಸಹ ಹೇಳಿರುವನು.

ಸರಕುಗಳಿಂದ ಆತ್ಮವನ್ನು ತೃಪ್ತಿಗೊಳಿಸಲಾಗದು. ಅದನ್ನು ಪಡೆಯಲು ನೀವು ವಿಧೇಯತೆಯ ಸಂಬಂಧ, ದೇವರ ಮತ್ತು ಆತನ ಪ್ರೀತಿಯ ಸಂಬಂದಕ್ಕೆ ಒಳಪಡಬೇಕು.

## ಅವನು ಮಾಡಿದ 4ನೆಯ ತಪ್ಪು –
## ಅವನ "ಜೀವಿತ ಒಪ್ಪಂದಕ್ಕೆ" ಎಂದು ತಿಳಿದಿದ್ದನು

ಐಶ್ವರ್ಯವಂತನು ಮಾಡಿದ ಇತರ ತಪ್ಪುಗಳ ಪಟ್ಟಿಯನ್ನೇ ಮಾಡಬಹುದು, ಆದರೆ ಇನ್ನೊಂದನ್ನು ಮಾತ್ರ ನಾನು ನಿಮಗೆ ತಿಳಿಸುವೆನು: ಅವನು ತನ್ನ "ಜೀವನವನ್ನು ಒಪ್ಪಂದಕ್ಕೆ ಒಳಪಡಿಸಿದ್ದನೆಂದು" ತಿಳುಕೊಂಡಿದ್ದನು. ಆದ್ದರಿಂದ ಅವನು ಅನೇಕ ವರ್ಷಗಳು ಅಭಿವೃದ್ಧಿ ಹೊಂದಿ ಜೀವಿಸುವನೆಂದು ಆಲೋಚಿಸಿದನು. "ಮುಂದಿನ *ಅನೇಕ ವರ್ಷಗಳಿಗೆ* ಅನೇಕ ವಸ್ತುಗಳನ್ನು ಸೇಕರಿಸಿರುವೆನೆಂದು" ಯೋಚಿಸಿರುವೆನು (ಲೂಕ 12:19; ಒತ್ತಿ ಹೇಳಿದ್ದು ನನ್ನದು). ಆದರೆ ದೇವರು ಅವನಿಗೆ, "*ಈ ಹೊತ್ತು ರಾತ್ರಿ* ನಿನ್ನ ಪ್ರಾಣವನ್ನು ನಿನ್ನ ಕಡೆಯಿಂದ ಕೇಳುವರು" (ವಚನ 20; ಒತ್ತಿ ಹೇಳಿದ್ದು ನನ್ನದು).

ಕೆಲವರ ಪ್ರಕಾರ, "ಲೋಕದಲ್ಲಿರುವ ಎಲ್ಲಾ ಸಮಯವು ತಮ್ಮದೇ" ಎಂದು ತಿಳಿದಿದ್ದಾರೆ. ಕ್ರೈಸ್ತರಾಗಬಹುದಾದ ಸಮಯ, ಕರ್ತನಿಗಾಗಿ ಗಂಭೀರವಾಗಿ ಜೀವಿಸುವ ಸಮಯ, ತಮಗೆ ಸಂಬಂಧಪಟ್ಟವರೊಂದಿಗೆ ಕರುಣೆಯಿಂದ ವರ್ತಿಸುವ ಸಮಯ ಒಬ್ಬರಿಗಿಂತಲೂ ಅಧಿಕ ಜನರು ನನಗೆ ಹೇಳಿರುವ ಮಾತ್ತೇನೆಂದರೆ, "ಹೌದು ನಾನು ಅದನ್ನು ಮಾಡಬೇಕು, ಆದರೆ ಅದನ್ನು ನಾನು *ಬೇರೆ ದಿವಸ* ಮಾಡುತ್ತೇನೆ." ಈ ಕುರಿತು ಸೋಲೋಮೋನನು ಎಚ್ಚರಿಸಿ, "ನಾಳೆ ಎಂದು ಕೊಚ್ಚಿಕೊಳ್ಳಬೇಡ; ಒಂದು ದಿನದೊಳಗೆ ಏನಾಗುವದೇ ನಿನಗೆ ತಿಳಿಯದು" (ಜ್ಞಾನೋಕ್ತಿ 27:1). ಭವಿಷ್ಯದ ಕುರಿತು ನಿಖರವಾದ ಯೋಜನೆಗಳನ್ನು ಮಾಡುವವರಿಗೆ, ಯಾಕೋಬನು ಬರೆದು:

> ಈ ಹೊತ್ತು ಇಲ್ಲದೆ ನಾಳೆ ನಾವು ಇಂಥ ಪಟ್ಟಣಕ್ಕೆ ಹೋಗಿ ಅಲ್ಲಿ ಒಂದು

ವರುಷವಿದ್ದು ವ್ಯಾಪಾರವನ್ನು ಮಾಡಿ ಲಾಭವನ್ನು ಸಂಪಾದಿಸುತ್ತೇವೆ ಅನ್ನುವವರೇ ಕೇಳಿರಿ. ನಾಳೆ ಏನಾಗುವದೋ ನಿಮಗೆ ತಿಳಿಯದು. ನಿಮ್ಮ ಜೀವಮಾನವು ಎಂಥದು? ನೀವು ಸ್ವಲ್ಪ ಹೊತ್ತು ಕಾಣಿಸಿಕೊಂಡು ಆ ಮೇಲೆ ಕಾಣದೆ ಹೋಗುವ ಹಬೆಯಂತಿರುತ್ತೀರಿ. ಆದದ್ದರಿಂದ ನೀವು ಅಂಥ ಮಾತನ್ನು ಬಿಟ್ಟು ದೇವರ ಚಿತ್ತವಾದರೆ ನಾವು ಬದುಕಿ ಈ ಕೆಲಸವನ್ನಾಗಲಿ ಆ ಕೆಲಸವನ್ನಾಗಲಿ ಮಾಡುವೆವು ಎಂದು ಹೇಳಬೇಕು (ಯಾಕೋಬ 4:13-15).

ಜೀವಿತವು ಅಲ್ಪಕಾಲ ಹಾಗೂ ಅನಿಶ್ಚಯ. "ಸ್ತ್ರೀಯಲ್ಲಿ ಹುಟ್ಟಿದ ಮನುಷ್ಯನು ಅಲ್ಪಾಯುಷ್ಯನಾಗಿಯೂ ಕಳವಳದಿಂದ ತುಂಬಿದವನಾಗಿಯೂ ಇರುವನು. ಹೂವಿನ ಹಾಗೆ ಅರಳಿ ಬಾಡುವನು. ನೆರಳಿನಂತೆ ನಿಲ್ಲದೆ ಓಡಿಹೋಗುವನು" (ಯೋಬ 14:1, 2). ನಾಳೆ ಬಾರದೆ ಇರುವದರಿಂದ, ಅದನ್ನು ಅವಲಂಭಿಸುವದು ವ್ಯರ್ಥ, ಈ ದಿನ ಮಾಡಬೇಕಾದದ್ದನ್ನು ಈ ದಿನವೇ ಮಾಡಬೇಕು.

ಮರಣದ ಕುರಿತು ನಾವು ಆಲೋಚಿಸುವದಿಲ್ಲ. ನೆನಸದೆ ಇರುವಾಗ ಮರಣವು ಸಂಭವಿಸುತ್ತದೆ. ಐಶ್ವರ್ಯವಂತನು ತನ್ನ ಜೀವಿತದ ಉತ್ತುಂಗದಲ್ಲಿದ್ದನು ಹಾಗು ಇನ್ನು ಬಹಳ ಕಾಲ ಬದುಕುವನೆಂದು ಭಾವಿಸಿದ್ದನು. ಆದರೆ ಅದಕ್ಕೆ ತದ್ವಿರುದ್ಧವಾಗಿ, ಅವನಿಗೆ ಇಪತ್ನಾಲ್ಕು ತಾಸುಗಳ ಸಹ ಇರಲಿಲ್ಲ: "ಈ ಹೊತ್ತು ರಾತ್ರಿ ನಿನ್ನ ಪ್ರಾಣವನ್ನು ನಿನ್ನಿಂದ ಕೇಳುವರು" "ಆಕಸ್ಮಿಕ ಮರಣ" ಸುದ್ದಿ ಪತ್ರಿಕೆಯ ಪ್ರಮುಖ ಅಂಶ![26] ಮರಣವನ್ನು ತಡೆಹಿಡಿಯುವ ಯಾವುದೇ ಚುಚ್ಚುಮದ್ದು ಇರುವದಿಲ್ಲ (ಇಬ್ರಿಯ 9:27). ಒಬ್ಬ ಮನುಷ್ಯನು ತನ್ನ ಆರೋಗ್ಯದ ಬಗ್ಗೆ ಎಚ್ಚರವಹಿಸಿ,[27] ತನ್ನ ದೇಹದಲ್ಲಿನ ಕೊಬ್ಬಿನ ಅಂಶವನ್ನು ಗಮನಿಸಿ, ತಕ್ಕ ಆಹಾರವನ್ನು ಸೇವಿಸಿದನು. ವ್ಯಾಯಾಮ ಹಾಗೂ ವೈದಕೀಯ ಸಲಹೆಯನ್ನು ಪಡೆದನು. ಆದರೆ ಅವನು ವಾಹನದ ಅಪಘಾತದಲ್ಲಿ ಮರಣ ಹೊಂದಿದನು. ನಾಳೆಯ ಬಗ್ಗೆ ಯಾರಿಗೂ ಖಾತರಿ ಇಲ್ಲದೆ ಇರುವದರಿಂದ, ನಿತ್ಯತ್ವದ ಬಗ್ಗೆ ಆಲೋಚಿಸೋಣ.

ಒಂದು ವೇಳೆ ಕರ್ತನು ನಿಮ್ಮ ಮುಂದೆ ಬಂದು, "ಈ ... ಹೊತ್ತಿನ ರಾತ್ರಿ ನಿನ್ನ ಅಗತ್ಯವಿದೆ"? ಎಂದು ಹೇಳಿದರೆ, ನಿನ್ನ ಆತ್ಮವು ಸಿದ್ಧವಾಗಿದೆಯೇ? ಒಬ್ಬನು ಬರೆದಿರುವಂತೆ, "ಆಧುನಿಕ ಜಗತ್ತಿನಲ್ಲಿ ಆತ್ಮವು ಅಪಾಯಕಾರಿ ಅಲ್ಲದಿದ್ದರೂ, ಅದು ಪ್ರಯೋಜನವಿಲ್ಲದ ಸಂಬಂಧವನ್ನು ಹೊಂದಿರುತ್ತದೆ-ಅದು, ಒಂದು ಗೆಡ್ಡೆ ರೋಗದಂತಿಗೆ."[28] ಆದರೆ ಸತ್ಯವೇದದ ಪ್ರಕಾರ ಆತ್ಮವು ಮನುಷ್ಯನಿಗೆ ಅಮೂಲ್ಯ ಆಸ್ತಿಯಾಗಿದೆ-ಅದು ಅವನ ಮೂಲವಾಗಿದೆ. ಆತ್ಮವು ನಾಶವಾದರೆ, ಸರ್ವವೂ ನಾಶವೇ. ಯೇಸುವಿನ ಪ್ರಶ್ನೆಯನ್ನು ನೆನಪು ಮಾಡಿರಿ: "ಒಬ್ಬನು ಲೋಕವನ್ನೆಲ್ಲಾ ಸಂಪಾದಿಸಿ, ಅವನ ಆತ್ಮ ನಷ್ಟ ಪಟ್ಟರೆ ಅವನಿಗೇನು ಪ್ರಯೋಜನ?" (ಮತ್ತಾಯ 16:26ಎ). ಖಂಡಿತವಾದ ಉತ್ತರವೇನೆಂದರೆ, "ಅದು ಅವನಿಗೆ ಯಾವ ಲಾಭವನ್ನು ತರಲಾರದು!" "ಈ ... ರಾತ್ರಿ ನಿನ್ನ ಅಗತ್ಯವಿದೆ" ಎಂಬ ಅಂಶಕ್ಕೆ ನಾವೆಲ್ಲರೂ ಸಿದ್ಧರಾಗಬೇಕು.

## ಮುಕ್ತಾಯ

ಈ ಹಿಂದೆ ನಾನು ತಿಳಿಸಿದ ಹಾಗೆ ಶವ ಸಂಸ್ಕಾರ ಸಮಯದಲ್ಲಿ ಐಶ್ವರ್ಯವಂತನ ಬಗ್ಗೆ ಸಕಲ ವಿಧವಾದ ಒಳ್ಳೆಯ ಸಂಗತಿಗಳನ್ನೇ ಹೇಳಿರಬಹುದು. "ಅವನನ್ನು ಸಮಾಧಿ ಮಾಡಿದವರು" ಅವನ ಸಮಾಧಿಯ ಮೇಲೆ "ಮಂದಾಳಾಗಿದ ನಾಯಕನು ಇದರಲ್ಲಿ ಮಲಗಿರುವನು" ಎಂಬ ಬರವಣಿಗೆಯನ್ನು ಬರೆದಿರಬಹುದು. ಆದರೆ ಕರ್ತನು ಅವನ ಬಗ್ಗೆ "ಇಲ್ಲಿ ಮೂರ್ಖನುಮಲಗಿದ್ದಾನೆ" ಎಂಬ ಹೇಳಿಕೆಯನ್ನು ನೀಡಿರಬಹುದು. ಆ ಯಶಸ್ವಿಯಾದ ಐಶ್ವರ್ಯವಂತನು ಮಾಡಿದ ತಪ್ಪುಗಳನ್ನು ನಾವುಗಳು ಮಾಡದಂತೆ ದೇವರು ಸಹಾಯಿಸಲಿ:

- ಮೌಲ್ಯಧಾರಿತ ಕಾರ್ಯಗಳನ್ನು ಮಾಡೋಣ.
- ಸ್ವಾರ್ಥದಿಂದ ದೂರವಿರೋಣ.
- ಸರಕುಗಳಿಂದ ಆತ್ಮಕ್ಕೆ ಈಡುನೀಡಲಾಗದು.
- ಪ್ರಾಣಾಪಾಯವಿಲ್ಲ ಎಂಬ ನಿಖರತೆ ಇರುವದಿಲ್ಲ.

ಅಂತಿಮವಾಗಿ ಒಂದು ಪ್ರಮುಖ ಅಂಶವನ್ನು ಗಮನಿಸೋಣ. ಇನ್ನೊಂದು ದಿವಸ ಬದುಕುವವು ಎಂಬ ನಿಖರತೆ ಇರುವದಿಲ್ಲ. ಈ ಅಧ್ಯಯನದ ಮೂಲಕ ನೀವುಗಳು ಎಚ್ಚರವಾಗಿರುವಿರಿ ಎಂದು ಭಾವಿಸುತ್ತೇನೆ. ಪಾಪದ ಅರಿವು ಸಹ ಉಂಟಾಗಿರಬಹುದು. ಜೀವಿತವು ಅಲ್ಪವೆಂದು ತಿಳಿದು ನಿಮ್ಮ ಜೀವಿತವನ್ನು ಕರ್ತನ ಕರುಣೆಗೆ ಸಮರ್ಪಿಸಿರಿ.

ಸಮಯದ ಅಭಾವವನ್ನು ನಾವುಗಳು ಅರಿತಿದ್ದು,[29] "ಇದು ಯಾವ ಸಮಯ ಎಂದು" ಕೇಳುತ್ತೇವೆ. ನನ್ನ ಕೈಯಲ್ಲಿರುವ ಗಡಿಯಾರ ಹಾಗೂ ಆ ಪುಸ್ತಕವು ದೈಹಿಕ ಹಾಗೂ ಆತ್ಮೀಕ ಸಮಯವನ್ನು ತಿಳಿಸುತ್ತದೆ.[30] ಇದು ಪಾಪಿಗಳು ರಕ್ಷಿಸಲ್ಪಡುವ ಸಮಯವಾಗಿದೆ (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38). ಅವಿಧೇಯರು ಪುನಶ್ಚೇತನಗೊಳ್ಳುವ ಸಮಯವು ಇದಾಗಿದೆ (ಗಲಾತ್ಯ 6:1; ಅಪೊಸ್ತಲರ ಕತ್ಯಗಳು 8:22, 23; ಯಾಕೋಬ 5:16). "ಇದೇ '*ಸುಪ್ರಸನ್ನತೆಯ ಕಾಲ*,' ... ಇದೇ 'ರಕ್ಷಣೆಯ ಕಾಲ' " (2 ಕೊರಿಂಥ 6:2ಬಿ; ಒತ್ತಿ ಹೇಳಿದ್ದು ನನ್ನದು).

---

**ಮಾಹಿತಿ**

ನಾನು ವಾಸಿಸಿದ ಹಾಗೂ ಸಂಧಿಸಿದ ಸ್ಥಳಗಳಿಗೆ ಲೂಕ 12:13-21ರ ವಾಕ್ಯದ ಅಗತ್ಯವಿದೆ. ನೀಲ್ ಲೈಟ್‌ಫುಟ್‌ರವರು ಬರೆದು: ಒಳ್ಳೆಯ ಸಮಾರ್ಯದವನ ಕಥೆಯ ಪ್ರಾಯೋಗಿಕ ನಿದರ್ಶನವಾದರೆ, ಮೂರ್ಖ ಐಶ್ವರ್ಯವಂಥನ ನಿದರ್ಶನವು ಅಗತ್ಯವಾಗಿದೆ.[31] ನಾನು ಇದನ್ನು ಪ್ರಸಂಗವಾಗಿ ಬೋಧಿಸಿರುವದಲ್ಲದೆ, ಅನೇಕ ನಾಯಕಿಗೆ ಪ್ರಾಯೋಗಿಕವಾಗಿ ತಿಳಿಸುತ್ತೇನೆ. ಇದನ್ನು ವಿಧವಿಧವಾದ ರೀತಿಯಲ್ಲಿ ಪ್ರಾಯೋಜಿಸಬಹುದು ಎಂದು ನಾನು ನಿಮಗೆ ತಿಳಿಸಿರುತ್ತೇನೆ. ಸ್ಥಿರವಿಲ್ಲದ ಜೀವಿತದ ಕುರಿತು ಒಂದು ಹೂವನ್ನು ಬಳಸಬಹುದು (ಯೋಬ 14:2). ಶರೀರ ಹಾಗೂ ಆತ್ಮೀಕ ಆಹಾರದ ಬಗ್ಗೆ ಒಂದು ಖಾಲಿಯಾದ ಪಾತ್ರೆಯನ್ನು ಬಳಸಬಹುದು.

---

ಟಿಪ್ಪಣಿಗಳು

[1]ಅನೇಕ ವರ್ಷಗಳ ಹಿಂದೆಯೇ ಈ ಪ್ರಸಂಗದ ಟಿಪ್ಪಣಿಗಳನ್ನು ಬರೆದುಕೊಂಡಿದ್ದನು. [2]ಅಮೇರಿಕೆಯಲ್ಲಿ ಅಂಗಡಿಗಳ ಕಿಟಕಿಗಳಲ್ಲಿ ಸರಕುಗಳನ್ನು ಹಾಗೂ ಅದರ ನಿಖರವಾದ ಬೆಲೆಯನ್ನು ಬರೆದಿರುವರು, ಕೆಲವುಸಾರಿ ರಾತ್ರಿ ಸಮಯದಲ್ಲಿ ಕಳ್ಳರು ನುಗ್ಗಿ ಅದರ ಬೆಲೆಯನ್ನು ಅಸ್ಥವ್ಯಸ್ಥ ಮಾಡಿರುವರು. [3]ನಾವಿರುವ ಪ್ರದೇಶದಲ್ಲಿ ಬಡವರು ಮತ್ತುಶ್ರೀಮಂತರು ಎಂಬ ವಿಭಾಗವಿದೆ. [4]ವ್ಯಕ್ತಿಗತ ನಿದರ್ಶನವನ್ನು ಬಳಸಿರಿ. [5]ಗ್ರೀಕ್ ಭಾಷೆಯ "ನೀನು" ಎಂಬುದು ಬಹುಪದ. ಅವನ ಸಹೋದರನು, ಅಲ್ಲಿರಬಹುದು. [6]ಯೇಸು ಸರ್ವಾಧಿಕಾರಿ (ಮತ್ತಾಯ 28:18). ಒಂದು ದಿನ ಆತನು ನ್ಯಾಯಾಧಿಪತಿಯಾಗುವನು (ಅಪೊಸ್ತಲರಕೃತ್ಯಗಳು 17:31). ಚಿಕ್ಕ ಚಿಕ್ಕ ಸಮಸ್ಯೆಯ ನ್ಯಾಯ ತೀರಿಸಲು ಆತನು ಬರಲಿಲ್ಲ. ಉತ್ತಮ ದರ್ಜೆಯ ಹಲ್ಲಿನ ಡಾಕ್ಟರ್ ಬಳಿಗೆ ಹೋಗಿ, ಉಗುರನ್ನು ಕೀಳು ಎಂದು ಹೇಳಿದ ಹಾಗೆ. [7]ನಮಗಿರುವ ಧಾನ್ಯಗಾರಕ್ಕಿಂತ ಭಿನ್ನವಾದ ಆತನ ಧಾನ್ಯಗಾರಗಳಿದ್ದವು. ದೇಶದ ಧಾನ್ಯವನ್ನು ಭೂಮಿಯಲ್ಲಿ ಗುಂಡಿ ಅಥವಾ ಟೌಕಿಯನ್ನು ಬಳಸುವರೆಂದು ಹಲವರು ಹೇಳುತ್ತಾರೆ. ಈ ವಿವರಗಳು ಕಥೆಯ ಮೇಲೆ ಯಂತಹ ಪ್ರಭಾವವನ್ನು ಬೀರುವದಿಲ್ಲ ನಿಮ್ಮ ಪ್ರದೇಶದಲ್ಲಿರುವ "ಧಾನ್ಯಗಾರಗಳನ್ನು" ಯೋಚಿಸಿ. [8]"ನೀವು ಸಿದ್ಧಪಡಿಸಿರುವದನ್ನು ಯಾರು ಹೊಂದುವರು?" ಎಂಬ

ಪ್ರಶ್ನೆಯ ಬಗ್ಗೆ ನೋಡಿ ಯೋಬ 27:16, 17; ಕೀರ್ತನೆ 39:6; 49-10; ಪ್ರಸಂಗಿ 2:18, 19, 21. ತಂದೆಕೂಡಿಸಿಟ್ಟಿದ್ದ ಬಗ್ಗೆ ಇಬ್ಬರು ಅಣ್ಣತಮ್ಮಂದಿರಲ್ಲಿ ಉಂಟಾದ ಜಗಳವು ಯೇಸುವಿನ ಮನಸ್ಸಿನಲ್ಲಿ ಇದ್ದಿರಬಹುದು. [9]"ದೇವರ ವಿಷಯದಲ್ಲಿ ಐಶ್ವರ್ಯವಂತನಾಗಲು" "ನಾವು ಹೊಂದಿರುವದೆಲ್ಲವು ದೇವರಿಂದ ಹೊಂದಿದ್ದೇವೆಂದು ಕೃತಜ್ಞತೆ ತೋರಿಸಲು, ದೇವರು ನೀಡಿರುವದನ್ನು ದೇವರ ಮಹಿಮೆಗಾಗಿ, ಇತರರಿಗಾಗಿ ಬಳಸಬೇಕು" (Warren W. Wiersbe, *The Bible Exposition Commentary,* vol. 1 [Wheaton, Ill.: Victor Books, 1989], 221). J. B. Phillips' translation has "is not rich where God is concerned" (*The New Testament in Modern English,* 151). [10]George W. Bailey, "The Rich Can Be Fools and Fools Can Be Rich," *The Preacher's Periodical* (July 1982): 26. (Emphasis his.)

[11]ಅಮೇರಿಕೆಯ ಹಣದ ಮೇಲೆ "ದೇವರಲ್ಲಿ ನಮ್ಮ ಭರವಸ" ಎಂದು ಬರೆದದೆ. [12]ಹಣದ ಮುಖ ಕಾಣುವಂತೆ ಹಿಡಿಯಿರಿ. [13]ಹಣವನ್ನು ಉದಾಹರಣೆಯಾಗಿ ಉಪಯೋಗಿಸಿ. [14]ಹಣವನ್ನು ಮರೆಯಾಗಿ ಇಡಿರಿ. [15]ಹಣವಿಡುವ ಜೇಬುಗಳನ್ನು ಬಳಸುವದಿಲ್ಲ. [16]ಕನ್ನಡಿಯ ಹಿಂಬದಿಗೆ ಬೆಳ್ಳಿಯ ಲೇಪನ ಬಳಸುವರು. [17]ಗಾಜು ಮತ್ತು ಕನ್ನಡಿಯ ತುಂಡನ್ನು ಬಳಸಿರಿ. [18]Ambrose, a fourth-century bishop of Milan (quoted in Richard C. Trench, *Notes on the Parables of Our Lord* [Westwood, N.J.: Fleming H. Revell Co., 1953], 341) ಈ ವಾಕ್ಯವನ್ನು ಆರಿಸಿಕೊಂಡಿದೆ. [19]ಹೆನ್ರೆ ಕೆಟ್‌ಚೆಪಪ್‌ನ್ನು ಮಾರುತ್ತಿದ್ದನು. [20]ಸಕಲ ಆಶೀರ್ವಾದವು ದೇವರಿಂದಲೇ (ಧರ್ಮೋಪದೇಶಕಾಂಡ 8:18; 1 ಪೂರ್ವಕಾಲವೃತ್ತಾಂತ 29:14; ಯಾಕೋಬ 1:17) ನಾವು ಮನೆವಾರ್ತೆಯವರು (ಲೂಕ 16:2; 1 ಕೊರಿಂಥ 4:2).

[21]William Barclay, *The Gospel of Luke,* rev. ed., The Daily Study Bible Series (Philadelphia: Westminster Press, 1975), 164. [22]ಉಂಡು, ಕಡಿದು ಪ್ರಕಾಶಿಸು ಎಂದು ಒಬ್ಬನು ವರ್ಣಿಸಿರುವನು. [23]ಒಂದು ಕೈಯಲ್ಲಿ ಆಕಾರವನ್ನು, ಇನ್ನೊಂದರಲ್ಲಿ ಸತ್ಯವೇದವನ್ನು ಹಿಡಿಯಿರಿ. [24]ಉತ್ತಮವಾದ ಮನೆ ಅಥವಾ ಕೆಲಸದ ನಿದರ್ಶನ ಹೇಳಿರಿ. [25]John Banister, "The Rich Fool," *Sermons of John Banister,* Great Preachers of Today series, vol. 8, ed. J. D. Thomas (Abilene, Tex.: Biblical Research Press, 1965), 116. [26]ಆಕಸ್ಮಿಕ ಮರಣದ ಕುರಿತು ದಿನ ನಿತ್ಯದ ಪತ್ರಿಕೆಯ ನೋಡಿರಿ. [27]ಆರೋಗ್ಯದ ಕುರಿತ ಹೇಳಿಕೆ. [28]ಅಪೆಂಡಿಕ್ಸ್‌ಗೆ ದೇಹದಲ್ಲಿ ಯಾವುದೇ ಕೆಲಸವಿರುವದಿಲ್ಲ. (*Grolier's Multimedia Encyclopedia,* 1997 ed., s.v. "appendix".) [29]ಕೆಲವು ಸ್ಥಳಗಳಲ್ಲಿ, ಸಮಯ ಪ್ರಜ್ಞೆ ಅಧಿಕವಾಗಿರುತ್ತದೆ. [30]ಗಡಿಯಾರ ಬಳಸಿ.

[31]Neil R. Lightfoot, *The Parables of Jesus*, Part 1 (Austin, Tex.: R. B. Sweet Co., 1963), 73.